ಕಥೆ






## ಎನ್.ಆರ್. ತಿಪ್ಪೇಸ್ವಾಮಿ

ಕಲೆ: ಎಸ್.ವಿ.ಹೂಗಾರ್


‘ಊಫ್...’ ‘ಓಂಮಂತ್ರಕಾಳಿ ಒಲಿಗ್ಗೊ....ಒಲಿಗ್ಗೊ...ಭದ್ರಕಾಳಿ.. ಒಲಿಗ್ಗೊ.... ಒಲಿಗ್ಗೊ. ಮಹಾಕಾಳಿ... ಒಲಿಗ್ಗೊ... ಒಲಿಗ್ಗೊ. ಮಹಾಕಾಲ, ಆದಿಶಕ್ತಿ, ಎಲ್ಲಿದ್ದೀಯವ್ವಾ, ಒಲಿಗ್ಗೊ.... ಒಲಿಗ್ಗೊ.. ..ಓಂ’

‘ಊಂ. . ಹೇಳು ಎಲ್ಲಿ ಅವಳು....?’

‘ಅದ್ಯಾವ ಮಾಯೆಯ ಹಿಂದೆ ಹೋದವಳವಳು?’

ಸುತ್ತು...ಭೂಮಿಯನ್ನು ಸುತ್ತಿ ಬಾರೆ, ನಿನಗೆ ಗೊತ್ತಿಲ್ಲದ ಪ್ರಪಂಚ ಯಾವುದಿದೆ ಈ ಭೂಮಿ ಮೇಲೆ?

(ನಾಲ್ಕೈದು ನಿಮಿಷದ ಬಳಿಕ)

‘ಭದ್ರಕಾಳೀ... ಮಹಾಕಾಳಿ... ಮಹಾಕಾಲ, ಆದಿಶಕ್ತಿ, ಹ್ರಾಂ... ಹ್ರೂಂ...ಸುತ್ತು ಬಂದೆಯಾ?’ ಎಂದು ಮಂತ್ರವಾದಿ ಪರಮೇಶ್ವರಪ್ಪ ಒಂದೇ ಸಮನೆ ದೇವಿಯ ಮುಂದೆ ಆರಾಧನಾ ಭಾಗವಾಗಿ ಎಡದ ಕೈಯಲ್ಲಿ ಕುಂಕುಮ ಲೇಪಿತ ಎಲುಬಿನ ಕಟ್ಟು, ಬಲಗೈಯಲ್ಲಿ ಬೇವಿನ ಸೊಪ್ಪು ಹಿಡಿದು ದೇವಿಗೊಮ್ಮೆ ಸೋಕಿಸುತ್ತಾ ತನ್ನ ಹಣೆಗೊಮ್ಮೆ ತಾಕಿಸಿಕೊಳ್ಳುತ್ತಾ ಅರೆಗಣ್ಣು ಮಾಡಿಕೊಂಡು ಮತ್ತಿನಿಂದ ವದರುತ್ತಿದ್ದ.

‘ಹೌದಮ್ಮ, ಇಬ್ರು ಮಕ್ಕಳು ಇದಾರಮ್ಮ, ಗಂಡನನ್ನೂ ಬಿಟ್ಟು ಯಾವನೋ ಮಾಡಿದ ಮೋಡಿಗೆ ಬಿದ್ದು, ಮನೆ ಬಿಟ್ಟು ಅವನ ಜೊತೆ ಹೋಗಿದಾಳೆ, ನೀನೇ ಕಾಪಾಡಬೇಕಮ್ಮ ತಾಯಿ’ ಎಂದು ಮಂತ್ರವಾದಿಯ ಎದುರು ಕುಳಿತ ಹನುಮಕ್ಕ, ಕೈ ಮುಗಿಯುತ್ತಾ ಗೊಳೋ ಎಂದು, ಒಮ್ಮೊಮ್ಮೆ ಕಣ್ಣೀರು ಹಾಕುತ್ತಾ, ಒಮ್ಮೊಮ್ಮೆ ಸಿಟ್ಟಿನಿಂದ ಹಲ್ಲು ಕಡಿಯುತ್ತಾ ಕಣ್ಣು ಕೆಂಪಗೆ ಮಾಡಿಕೊಂಡು, ಒಮ್ಮೆ ಮಂತ್ರವಾದಿಯನ್ನು ಮತ್ತೊಮ್ಮೆ ಪಕ್ಕ ಕುಳಿತ ತಂಗಿ ಸುಭದ್ರಮ್ಮಳನ್ನೂ ನೋಡುತ್ತಿದ್ದಳು.

ಮಂತ್ರವಾದಿ ಪರಮೇಶ್ವರಪ್ಪನು ದೊಡ್ಡದಾಗಿ ಹೂಂಕರಿಸುತ್ತಾ ಕೇಕೆ ಹಾಕಿದಂತೆ ಮಾಡಿ, ದೇವಿಯನ್ನು ಮತ್ತೊಮ್ಮೆ ಕೆಟ್ಟದಾಗಿ ಅರ್ಥವಾಗದ ಮಾತುಗಳಲ್ಲಿ ಬೈದು ಕ್ಷಣ